4) ರೂ. 6.00 ಲಕ್ಷಗಳನ್ನು ನೆಚ್ಚ ಮಾಡಲಾಗಿದೆ.

5) ರೂ. 5.04 ಲಕ್ಷ ರೂ.ಗಳು

6) ಪ್ರಸ್ತುತ ಈ ವಿಷಯವು ಸರ್ಕಾರದ ಪರಿತೀಲನೆಯಲ್ಲಿ ಇರುವುದಿಲ್ಲ.

ಬೆಂಗಳೂರಿನ ಎನ್.ಜಿ.ಎಫ್ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವುದು.

1250(1233) ಶ್ರೀ ಟಿ.ವಿ. ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು;

ಆ) ಈ ಕಾರ್ಖಾನೆಯು ಲಾಭ-ನಷ್ಟದ ಮಾಹಿತಿಯನ್ನು ಒದಗಿಸುವುದು;

ಇ) ಈ ಕಾರ್ಖಾನೆಯನ್ನು ಮುಚ್ಚಲು ಅಥವಾ ಖಾಸಗೀಕರಣಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಇರುತಕ್ಕ ಜಮೀನೆಷ್ಟು;

ಊ) ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ತಜ್ಞ ಕೈಗಾರಿಕೋದ್ಯಮಿಯೊಬ್ಬರನ್ನು ನೇಮಿಸಲು ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಬೆಂಗಳೂರಿನ ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ಕೆಲಸಮಾಡುತಕ್ಕ ಒಟ್ಟು ಕಾರ್ಮಿಕರು - 2343

ಆ) ಸದರಿ ಕಾರ್ಖಾನೆಯ ಕಳೆದ 5 ವರ್ಷಗಳ ಲಾಭ : ನಷ್ಟ ಈ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

ವರ್ಷ	ಲಾಭ : ನಷ್ಟ
1996-97	-1603.57
1997-98	-1798.79
1998-99	-3746.40
1999-00	-1843.22
2000-01	2131.20

ಇ) ಹೌದು.

ಈ) ಈ ಕಾರ್ಖಾನೆಯು ಕಳೆದ 10 ವರ್ಷಗಳಿಂದ ಸತತವಾಗಿ ನಷ್ಟವನ್ನು ಅನುಭವಿಸುತ್ತಿದೆ. 1996ರಲ್ಲಿ ಬಿ.ಐ.ಎಫ್.ಆರ್. ಪುನಶ್ಚೇತನ ಯೋಜನೆಯನ್ನು ಅಳವಡಿಸಿತು. ಆದರೂ ಸಹಿತ ಯೋಜನೆಯು ಮಾರುಕಟ್ಟೆಯ ತೀವ್ರ ಪೈಪೋಟಿ, ಉದ್ದಿಮೆಗಳ ಹಿಂಜರಿತದಿಂದಾಗಿ ನಿರೀಕ್ಷಿತ ಮಟ್ಟವನ್ನು ಮುಟ್ಟಲಿಲ್ಲ. ಸಾಲಿನ ನಿಧಿಯ ಕೊರತೆಯಿಂದಾಗಿ ಕಂಪನಿಯ ಆಸ್ತಿಯನ್ನು ಮಾರಾಟ ಮಾಡಬೇಕಾಯಿತು. ಫೆಬ್ರವರಿ 2001ರಲ್ಲಿ, ಬಿ.ಐ.ಎಫ್.ಆರ್. ತನ್ನ ಯೋಜನೆಯನ್ನು ವಿಫಲಗೊಂಡಿತೆಂದು ಘೋಷಿಸಿ, ಸದರಿ ಕಂಪನಿಯನ್ನು ಪರಿಸಮಾಪನೆಗೊಳಿಸಲು ಅನುಮತಿ ನೀಡಿತು. ಆದಾಗ್ಯೂ, ಸರ್ಕಾರವು ಕಾಲಕಾಲಕ್ಕೆ ಕಂಪನಿಗೆ ನಿಧಿಯನ್ನು ಬಿಡುಗಡೆ ಮಾಡುತ್ತಾ ಬಂದಿದೆ.

ಉ) ಪ್ರಸ್ತುತ ಕಂಪನಿಯ ಸ್ವಾಮ್ಯದಲ್ಲಿ ಇರುವ ಜಮೀನು 174.7 ಎಕರೆಗಳು.

ಊ) ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕಿಯೋನಿಕ್ಸ್ ಮತ್ತು ಯುವ ಡಾಟ್‌ಕಾಮ್ ಹಂಚಿಕೆ ಕುರಿತು.

1251(1215) ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಜಿಕ್ಕೋಡಿ) :— ಮಾನ್ಯ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರದ ಒಂದು ಸಂಸ್ಥೆಯಾದ ಕಿಯೋನಿಕ್ಸ್‌ದಲ್ಲಿ, ಮೀಸಲಾತಿ ನೀತಿಯನ್ನು ಅನುಸರಿಸದಿರಲು ಕಾರಣವೇನು; ಇದರಿಂದ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿರುವುದೆಂಬುದು ಸರ್ಕಾರದ ಗಮನದಲ್ಲಿದೆಯೇ?